Ujjivan
Build a Better Life

**ಉಜ್ಜೀವನ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್,**

**ಸಿಐಎನ್ ನಂ. U65999KA2004PLC035329**

**ನೋಂದಾಯಿತ ಕಛೇರಿ: ಗ್ರೇಪ್ ಗಾಡನ್, ನಂ.27, 3ನೇ ಎ ಕ್ರಾಸ್, 18ನೇ ಮೈನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095. ದೂ +91 80 4071 2121. ಇ-ಮೈಲ್- compliance@ujjivan.com, www.ujjivan.com**

# 12ನೇ ವಾರ್ಷಿಕ ಸಾಮಾನ್ಯ ಸಭೆ, ರಿಮೋಟ್ ಇ-ವೋಟಿಂಗ್ ಹಾಗೂ ಪುಸ್ತಕ ಮುಚ್ಚಿರುವ ಕುರಿತಾದ ತಿಳುವಳಿಕೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ

1. ಕಂಪನಿಯ 12ನೇ ವಾರ್ಷಿಕ ಸಾಮಾನ್ಯ ಸಭೆಯು ("ವಾಸಾಸ") ದಿನಾಂಕ: 10-08-2016ರ ಅಪರಾಹ್ನ 2.30 ಕ್ಕೆ ಅಪೆಕ್ಸ್ II, ನಂ.23-26, ಗ್ರೇಪ್ ಗಾರ್ಡನ್, ನಂ17ನೇ ಹೆಚ್ ಮೇನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560095 ಇಲ್ಲಿ ನಡೆಯಲಿದ್ದು, ಸದರಿ ಸಭೆಯಲ್ಲಿ ದಿನಾಂಕ: 25 ಮೇ 2016 ರ ಸೂಚನಾ ಪತ್ರದಲ್ಲಿ ತಿಳಿಸಿರುವ ವಿಷಯಗಳ ಕುರಿತು ಚರ್ಚಿಸಲಾಗುವುದು.
2. ಕಂಪನಿಯ ಎಲ್ಲಾ ಠೇವಣಿ ಭಾಗೀದಾರರು ಹಾಗೂ ಇ-ಮೇಲ್ ಐಡಿ ನೋಂದಾಯಿಸಿರುವ ಎಲ್ಲಾ ಸದಸ್ಯರಿಗೂ ವಾಸಾಸ ಯ ಸೂಚನಾ ಪತ್ರವನ್ನು ಆರ್ಥಿಕ ವರ್ಷ 2015-16ರ ವಾರ್ಷಿಕ ವರದಿಯೊಂದಿಗೆ ಕಳುಹಿಸಿಕೊಡಲಾಗಿದೆ. ಇವುಗಳನ್ನು ಕಂಪನಿಯ ವೆಬ್‌ಸೈಟ್ www.ujjivan.comನಲ್ಲಿ ಕಾಣಬಹುದಾಗಿದೆ. ಕಂಪನಿಯ ಇತರೆ ಎಲ್ಲಾ ಸದಸ್ಯರಿಗೂ ವಾಸಾಸ ಹಾಗೂ ಆರ್ಥಿಕ ವರ್ಷ 2015-16ರ ವರದಿಯ ಪ್ರತಿಗಳನ್ನು ಅನುಮತಿಸಲ್ಪಟ್ಟ ಪದ್ಧತಿಯಲ್ಲಿ ಅವರುಗಳು ನೋಂದಾಯಿಸಿರುವ ವಿಳಾಸಗಳಿಗೆ ಕಳುಹಿಸಿಕೊಡಲಾಗಿದೆ. ವಾಸಾಸ ಸೂಚನೆ ಪತ್ರ ರವಾನೆ ಕಾಯವು ದಿನಾಂಕ 16 ಜುಲೈ 2016ಕ್ಕೆ ಕೊನೆಗೊಂಡಿದೆ.
3. ನಿಗಧಿತ ದಿನಾಂಕ: 03-08-2016 ರವರೆಗೆ ಸದಸ್ಯತ್ವ ವಹಿಯಲ್ಲಿ ನೋಂದಾಯಿಸಲ್ಪಟ್ಟ ಸದಸ್ಯರು ಅಥವಾ ಠೇವಣಿ ಭಾಗೀದಾರರ ವಹಿಯಲ್ಲಿ ನೋಂದಾಯಿಸಲ್ಪಟ್ಟಿರುವ ಸದಸ್ಯರು ಇ-ವೋಟಿಂಗ್ ವಾಸಾಸ ಯಲ್ಲಿ ಮತ ಚಲಾಯಿಸುವ ಸೌಲಭ್ಯ ಹೊಂದಿದ್ದು, ವಾಸಾಸ ಯ ನಡವಳಿಯಲ್ಲಿ ತಿಳಿಸಿರುವ ಸಾಮಾನ್ಯ ವಹಿವಾಟು(ಗಳು) ಅಥವಾ ವಿಶೇಷ ವಹಿವಾಟಿನ ಕುರಿತಂತೆ ಮೆ: ಕಾರ್ವಿ ಕಂಪ್ಯೂಟರ್ ಶೇರ್ ಪ್ರೈವೇಟ್ ಲಿಮಿಟೆಡ್ (ಕಾರ್ವಿ) ರವರ ಎಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟಮ್ ಮೂಲಕ ಮತ ಚಲಾಯಿಸಬಹುದಾಗಿದೆ, ಎಲ್ಲಾ ಸದಸ್ಯರಿಗೂ ತಿಳಿಪಡಯಸುವುದೇನೆಂದರೆ.
   - ಅ. ವಾಸಾಸ ಸೂಚನಾ ಪತ್ರದಲ್ಲಿ ತಿಳಿಸಿರುವ ವಿಷಯ ಕುರಿತು ಎಲೆಕ್ಟ್ರಾನಿಕ್ ವೋಟಿಂಗ್ ಮೂಲಕ ವ್ಯವಹರಿಸಬಹುದಾಗಿದೆ.
   - ಆ. ರಿಮೋಟ್ ಇ-ವೋಟಿಂಗ್ ಪ್ರಾರಂಭವಾಗುವ ದಿನಾಂಕ: 04 ಆಗಸ್ಟ್ 2016 (ಬೆಳಿಗ್ಗೆ 10.00 IST)
   - ಇ. ರಿಮೋಟ್ ಇ-ವೋಟಿಂಗ್ ಕೊನೆಗೊಳ್ಳುವ ದಿನಾಂಕ:09 ಆಗಸ್ಟ್ 2016 (ಸಂಜೆ 5.00 IST)
   - ಈ. ಎಲೆಕ್ಟ್ರಾನಿಕ್ ವೋಟಿಂಗ್ ಅಥವಾ ವಾಸಾಸ ಯಲ್ಲಿ ಮತದಾನ ಮಾಡಲು ಅರ್ಹತೆ ನಿರ್ಧರಿಸುವ ಕೊನೆಯ ದಿನಾಂಕ: 03 ಆಗಸ್ಟ್ 2016
   - ಉ. 09 ಆಗಸ್ಟ್ 2016 ಸಮಯ ಸಂಜೆ 5.00 ಗಂಟೆಗೆ ಇ-ವೋಟಿಂಗ್ ಮುಕ್ತಾಯಗೊಳ್ಳಲಿದ್ದು, ನಂತರ ಇ-ವೋಟಿಂಗ್ ಅವಕಾಶವಿರುವುದಿಲ್ಲ
   - ಊ. ವಾಸಾಸ ಸೂಚನೆ ರವಾನೆಯಾದ ನಂತರ ಕಂಪನಿಯ ಷೇರುಗಳನ್ನು ಖರೀದಿಸಿ ಅರ್ಹತಾ ನಿರ್ಧರಣಾ ದಿನಾಂಕವಾದ 03 ಆಗಸ್ಟ್ 2016 ರಂದು ಷೇರುಗಳನ್ನು ಹೊಂದಿರುವವರು mohsin.mohd@karvy.com ಮನವಿ ಸಲ್ಲಿಸಿ ಲಾಗಿನ್ ಐಡಿ ಹಾಗೂ ಪಾಸ್ ವರ್ಡ್ ಪಡೆಯಬಹುದಾಗಿದೆ. ಈಗಾಗಲೇ ಇ-ವೋಟಿಂಗ್‌ಗಾಗಿ ಕಾರ್ವಿಯಲ್ಲಿ ನೋಂದಾಯಿಸಲ್ಪಟ್ಟಿದಲ್ಲಿ ತಾವು ಹೊಂದಿರುವ ಲಾಗಿನ್ ಐಡಿ ಹಾಗೂ ಪಾಸ್ ವರ್ಡ್ ಬಳಸಿ ಮತ ಚಲಾಯಿಸಬಹುದಾಗಿದೆ.
   - ಋ. ಸದಸ್ಯರ ಆದ್ಯ ಗಮನಕ್ಕೆ: 1) ರಿಮೋಟ್ ಇ-ವೋಟಿಂಗ್ ಅನ್ನು ಕಾರ್ವಿ ದಿನಾಂಕ:09 ಆಗಸ್ಟ್ 2016 ರ ಸಂಜೆ 5.00 ಗಂಟೆಗೆ ಕಡ್ಡಾಯವಾಗಿ ನಿಶ್ಚಲಗೊಳಿಸಲಿದ್ದು, ನಡವಳಿಯೊಂದರ ಮೇಲೆ ಸದಸ್ಯರು ಚಲಾಯಿಸುವ ಮತವನ್ನು ಪದೇ ಪದೇ ಬದಲಾಯಿಸಲು ಅವಕಾಶವಿರುವುದಿಲ್ಲ, 2) ವಾಸಾಸ ನಡೆಯುವ ಸ್ಥಳದಲ್ಲಿಯೂ ಎಲೆಕ್ಟ್ರಾನಿಕ್ ವೋಟಿಂಗ್ (ಇನ್‌ಸ್ಟಾ ಪೋಲ್) ವ್ಯವಸ್ಥೆ ಕಲ್ಪಿಸಲಾಗಿದೆ. ಮತ ಚಲಾಯಿಸಲು ಅರ್ಹರಾದ ಆದರೆ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸದ ಸದಸ್ಯರು ಮಾತ್ರ ವಾಸಾಸ ಯಲ್ಲಿ ಒದಗಿಸಿರುವ ಎಲೆಕ್ಟ್ರಾನಿಕ್ ವೋಟಿಂಗ್ (ಇನ್‌ಸ್ಟಾ ಪೋಲ್) ಮುಖಾಂತರ ಮತ ಚಲಾಯಿಸಬಹುದಾಗಿದೆ. 3) ವಾಸಾಸ ಆರಂಭಗೊಳ್ಳುವ ಮುನ್ನವೇ ಮತ ಚಲಾಯಿಸಿದ ಸದಸ್ಯರು ಸಭೆಗೆ ಹಾಜರಾಗಬಹುದಾಗಿದ್ದು, ಅವರಿಗೆ ಮತ್ತೊಮ್ಮೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ, 4) ನಿರ್ಧರಣಾ ದಿನಾಂಕದಂದು ಸದಸ್ಯತ್ವ ವಹಿಯಲ್ಲಿ ಅಥವಾ ಠೇವಣಿ ಭಾಗೀದಾರರ ವಹಿಯಲ್ಲಿ ಹೆಸರು ನೋಂದಾಯಿಸಲ್ಪಟ್ಟಿರುವ ಸದಸ್ಯರು ಮಾತ್ರ ಇ-ವೋಟಿಂಗ್ ಹಾಗೂ ವಾಸಾಸ ದ ಇನ್‌ಸ್ಟಾ ಪೋಲ್ ಮುಖಾಂತರ ಮತ ಚಲಾಯಿಸುವ ಹಕ್ಕನ್ನು ಹೊಂದಬಹುದಾಗಿದೆ.
   - ಎ. ವಾಸಾಸಯ ಸೂಚನೆಯು ಕಂಪನಿಯ ಅಧಿಕೃತ ವೆಬ್‌ಸೈಟ್ www.ujjivan.com ಹಾಗೂ ಕಾರ್ವಿ ವೆಬ್‌ಸೈಟ್ https://evoting.karvy.comನಲ್ಲಿ ಲಭ್ಯವಿದೆ.
   - ಏ. ಯಾವುದೇ ವಿಚಾರಣೆಗಳಿದ್ದಲ್ಲಿ ಸದಸ್ಯರು https://evoting.karvy.comನಿಂದ ಕ್ಯೆಪಿಡಿ (FAQ) ಹಾಗೂ ಇ-ವೋಟಿಂಗ್ ಮಾಡುವವರು ಬಳಕೆದಾರರ ಕೈಪಿಡಿ ಡೌನ್‌ಲೋಡ್ ಮಾಡಿಕೊಂಡು ಉಲ್ಲೇಖಿಸಬಹುದಾಗಿದೆ. ದೂ.ಸಂ:1-800-34-54-001ಗೆ ಶುಲ್ಕ ರಹಿತ ಕರೆ ಮಾಡಬಹುದು ಅಥವಾ ಶ್ರೀ ಮೊಹಮದ್ ಮೋಹ್ಸಿನ್ ಉದ್ದಿನ್, ಸೀನಿಯರ್ ಮ್ಯಾನೇಜರ್, ಕಾರ್ವಿ ಕಂಪ್ಯೂಟರ್ ಶೇರ್ ಪ್ರೈವೇಟ್ ಲಿಮಿಟೆಡ್, ಕಾರ್ವಿ ಸೆಲೆನಿಯಮ್, ಟವರ್ ಬಿ, ಪ್ಲಾಟ್ ನಂ: 31 ಮತ್ತು 32, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ಗಾಚಿಬೋಲಿ, ಹೈದರಾಬಾದ್-500 032 ಸಂಪರ್ಕಿಸಬಹುದಾಗಿದೆ. ದೂ.ಸಂ: 91 040 6716 1562 ಇಮೇಲ್: mohsin.mohd@karvy.com

4) ಆರ್ಥಿಕ ವರ್ಷ 2015-16ರ ಲಾಭಾಂಶ ನಿರ್ಧರಣೆಗಾಗಿ ಕಂಪನಿಯ ಸದಸ್ಯತ್ವ ವಹಿ ಹಾಗೂ ಷೇರು ವರ್ಗಾವಣೆ ಪುಸ್ತಕವು ಗುರುವಾರ 04 ಆಗಸ್ಟ್ 2016 ರಿಂದ ಬುಧವಾರ 10 ಆಗಸ್ಟ್ 2016 ರವರೆಗೆ (ಎರಡು ದಿನಗಳು ಸೇರಿದಂತೆ) ಮುಚ್ಚಲ್ಪಟ್ಟಿರುತ್ತದೆ.

**ಉಜ್ಜೀವನ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ನ ಪರವಾಗಿ**
**ಸಹಿ/-**
**ಸಮೀತ್ ಘೋಷ್**
**ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕರು**

**ಸ್ಥಳ: ಬೆಂಗಳೂರು**
**ದಿನಾಂಕ: ಜುಲೈ 18, 2016**